**ಓ.ಎಸ್. ನಂ. 93/2020** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 5.8.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ ಪಿ.ಎಸ್ ವಕೀಲರಿಂದಃ</u>

ನನ್ನ ತಂದೆ ಸಿದ್ದೇಗೌಡರು ದಿನಾಂಕ 8.9.2015 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಅವರ ಮಗ ಸ್ವಾಮಿ ಅಲಿಯಾಸ್ ಗವಿ ರವರು ವಾದಿಯಿಂದ ಉತ್ತರ ಕ್ರಿಯೆಗೆ 30 ಸಾವಿರ ಹಣವನ್ನು ಪಡೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜನವರಿ 2017 ರಲ್ಲಿ ನನ್ನ ತಾಯಿಯು 3 ನೇ ಪ್ರತಿವಾದಿಯ ಮದುವೆಗೆ ಮಾಡಿರುವ ಸಾಲ ತೀರಿಸಲು ವಾದಿಯಿಂದ ಪುನಃ 1,05,000/- ಹಣವನ್ನು ಮುಂಗಡವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿದಾರರು ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎನ್ನುವರು. 2017 ಜನವರಿಯಲ್ಲಿ ನನ್ನ ತಾಯಿಗೆ ತುರ್ತಾಗಿ ಹಣ ಬೇಕಾಗಿದ್ದರಿಂದ ಕ್ರಯದ ಕರಾರುಪತ್ರದಲ್ಲಿ ಯಾವುದೇ ಷರಾ ನಮೂದಿಸದೇ ನಂಬಿಕೆ ಆಧಾರದ ಮೇಲೆ ವಾದಿಯು ನನ್ನ ತಾಯಿಗೆ 1,05,000/- ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. 2014 ರಿಂದ 2019 ರವರೆಗೆ ಸರ್ವೆ ಇಲಾಖೆಯವರು ಸರ್ವೆ ನಂ.5 ಕ್ಕೆ ಸಂಪೂರ್ಣ ನಕಾಶೆ ಆಗದಿರುವುದರಿಂದ ಏಕ ವ್ಯಕ್ತಿಯ ಕೋರಿಕೆ ಮೇರೆಗೆ ನಕಾಶೆ ನೀಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 2019 ರ ನಂತರ ಸದರಿ ಸರ್ವೆ ನಂ.5 ರಲ್ಲಿ ಏಕ ವ್ಯಕ್ತಿ ಕೋರಿಕೆ ಮೇರೆಗೆ ನಕಾಶೆ ನೀಡಲು ಪ್ರಾರಂಭಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ವಾದಿಗೆ ಗೊತ್ತಾದ ನಂತರ ವಾದಿಯು ಪ್ರತಿವಾದಿಯರಿಗೆ ದಾವಆಸ್ತಿಗೆ ಸಂಬಂಧಿಸಿದಂತೆ ನಕ್ಷೆ ಪಡೆದುಕೊಳ್ಳುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿಯೂ ಸಹ ಸ್ವಾಮಿ ಅಲಿಯಾಸ್ ಗವಿ ರವರು 50 ಸಾವಿರ ಕೊಡಿಸಿ, ನಕ್ಷೆಯನ್ನು ಪಡೆದುಕೊಳ್ಳುತ್ತೇನೆ ಎಂದು ವಾದಿಯ ಬಳಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಪ್ರತಿವಾದಿಯರು ನಮ್ಮ ಗುರುತಿನ ಚೀಟಿಯನ್ನು ನೀಡಿ ನಕ್ಷೆ ಪಡೆದುಕೊಳ್ಳುವ ಪ್ರಕ್ರಿಯೆಗೆ ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ತಂದೆ ತೀರಿಕೊಂಡ ನಂತರ ಅವರ ಹೆಸರಿನಲ್ಲಿದ್ದ 1-20 ಎಕರೆ ಆಸ್ತಿಯ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಮುಂದುವರಿಯುತ್ತಿದೆ ಎಂದರೆ ಸರಿಯಲ್ಲ. ದಿನಾಂಕ 7.10.2020 ರಂದು ವಾದಿಯು ವಕೀಲರ ಮೂಲಕ ಪ್ರತಿವಾದಿಯರಿಗೆ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದಕ್ಕೆ ಪ್ರತ್ಯುತ್ತರ ನೀಡಿರುತ್ತೇವೆ ಎನ್ನುವರು. ಸದರಿ ನೋಟಿಸಿನಲ್ಲಿ ದಿನಾಂಕ 18.11.2020 ರಂದು ಉಳಿಕೆ ಹಣವನ್ನು ಪಡೆದುಕೊಂಡು ಕ್ರಯಪತ್ರ ಬರೆದುಕೊಡಲು ನಮ್ಮನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಆಸ್ತಿಯ ಮೌಲ್ಯ 60 ಲಕ್ಷಕ್ಕಿಂತ ಜಾಸ್ತಿ ಇರುತ್ತದೆ ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇರುತ್ತದೆ. 2014 ಅಥವಾ ಈಗ ದಾವಆಸ್ತಿಯ ಮೌಲ್ಯ 60 ಲಕ್ಷ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನ್ಯಾಯಾಲಯದ ಡಿಕ್ರಿಯ ಪ್ರಕಾರ ಖಾತೆ ಮಾಡಿಸಿಕೊಡುತ್ತೇನೆ ಎಂದು ನಮ್ಮನ್ನು ಕರೆದುಕೊಂಡು ಹೋಗಿ ಕರಾರುಪತ್ರವನ್ನು ಸೃಷ್ಟಿ ಮಾಡಿಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ1 ದಾಖಲೆಯಾಗುವ ಪೂರ್ವದಲ್ಲಿ ವಾದಿಯ ಪರಿಚಯ ಇರಲಿಲ್ಲ. 1,05,000/- ಹಣವನ್ನು ಕೊಟ್ಟಿರುವುದನ್ನು ನಾವು ನಿರಾಕರಿಸಿದ ಪಕ್ಷದಲ್ಲಿ ವಾದಿಯು ಸದರಿ ಹಣವನ್ನು

ಸಹ ಕೊಡಲು ಬದ್ಧನಾಗಿರುತ್ತೇನೆ ಎಂದು ನ್ಯಾಯಾಲಯದಲ್ಲಿ ಒಪ್ಪಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಿನಾಂಕ 6.1.2014 ರಂತೆ ಬರೆದುಕೊಟ್ಟಿರುವ ಕ್ರಯದ ಕರಾರುಪತ್ರದಂತೆ ಕ್ರಯಪತ್ರವನ್ನು ಬರೆದುಕೊಡಲು ಬಾಧ್ಯಸ್ಥರಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯಿಂದ ಇನ್ನು ಹೆಚ್ಚಿನ ಹಣವನ್ನು ಪಡೆಯಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.